

# ಫೋಟೋ ಫಿನಿಶ್!





ಇದೇನು ಅದ್ಭುತ! ಫೋಟೋ ಮಿಕ್ಸಿಂಗ್ ಇರಬಹುದೆ? ಅಥವಾ ಮ್ಯಾಜಿಕ್?

–ಎರಡೂ ಅಲ್ಲ. ಇದು ಅಂತರ್ಜಾತಿ ಪ್ರಾಣಿಗಳ ಪ್ರೇಮವೂ ಅಲ್ಲ.

ಜಿಂಕೆಗಳ ಗುಂಪನ್ನೇ ಭೇದಿಸಿ ಬೇಟೆಯಾಡುವ ಜಾಯಮಾನಕ್ಕೆ ಸೇರಿದ ಚಿರತೆಗಳ ಗುಂಪಿನ ಬಳಿ ಬಂದ ಜಿಂಕೆಯೊಂದು ಚಿನ್ನಾಟವಾಡಿದ ದೃಶ್ಯವಿದು. ನಿಜಕ್ಕೂ ಜಿಂಕೆಯ ಗುಂಡಿಗೆಯ ಗಟ್ಟಿತನಕ್ಕೆ ಭೇಷ್ ಎನ್ನಬೇಕು!

ಮೈಕೆಲ್ ಡೆನಿಸ್ ಹ್ಯೂಟ್ ಎಂಬ ವನ್ಯಜೀವಿ ಛಾಯಗ್ರಾಹಕ ಕಳೆದ ಅಕ್ಟೋಬರ್‌ನಲ್ಲಿ ಕೀನ್ಯಾದ 'ಮಸಾಯಿ ಮಾರಾ' ಸಫಾರಿಯಲ್ಲಿ ಉಸಿರು ಬಿಗಿ ಹಿಡಿದು ಸೆರೆಹಿಡಿದ ಅಪರೂಪದ, ಅದ್ಭುತ ಛಾಯಾಚಿತ್ರವಿದು.

ಹದಿನೆಂಟು ತಿಂಗಳು ವಯಸ್ಸಿನ ಮೂರು ಗಂಡು ಚಿರತೆಗಳು ಮತ್ತು ಹದಿಹರೆಯದ ಜಿಂಕೆಯೊಂದು ಸುಮಾರು ಹದಿನೈದು ನಿಮಿಷಗಳ ಕಾಲ ಮೈ ಮರೆತು ಚಿನ್ನಾಟದಲ್ಲಿ ತೊಡಗಿದ್ದಾಗ ಸೆರೆ ಸಿಕ್ಕ ದೃಶ್ಯಗಳು.

ಮೈಕೆಲ್‌ಗೆ ಈ ದೃಶ್ಯ ಕಂಡಿದ್ದೇ ನಂಬಲಾಗಿಲ್ಲ. ತನ್ನ ಮೈಯನ್ನೇ ಚಿವುಟಿ ನೋಡಿದ್ದಾನೆ. ತಡ ಮಾಡದೆ ಈ ವಿಸ್ಮಯಕಾರಿ ದೃಶ್ಯದ ಸರಣಿ ಚಿತ್ರಗಳನ್ನು ಕ್ಲಿಕ್ಕಿಸಿದ್ದಾನೆ.

ಕೊನೆ ಕೊನೆಗೆ ಚಿರತೆಯೊಂದು ಜಿಂಕೆಯ ಕುತ್ತಿಗೆಯ ಬಳಿ ಹೊಡೆಯಲು ಮುಂದಾಗಿದೆ. ತಕ್ಷಣ ಜಿಂಕೆ ಎಚ್ಚೆತ್ತಿದೆ. 'ಹೋ. ಇವುಗಳು ತಮ್ಮ ಬುದ್ಧಿ ಬಿಡುವುದಿಲ್ಲ.. ಎಲ್ಲರೂ ಒಂದಾಗಿರೋಣ ಎಂದು ಬಂದರೆ ಇದು ಯಾಕೋ ಎಡವಟ್ಟಾಯಿತು' ಎಂದು ಅಂದುಕೊಂಡೋ ಏನೋ.. ತಕ್ಷಣ ಓಡಿ ತಪ್ಪಿಸಿಕೊಂಡಿದೆ.

■ ವಸಂತ ಮಾಲವಿ